ಶ್ರೀ ಮಾಲ ಮರಿಯಪ್ಪ.—ಸಾಮಾನ್ಯವಾಗಿ ಷೇರು ಹೋಲ್ಡರ್‌ಗಳನ್ನು ಸಂಘಗಳಲ್ಲಿ ಭರ್ತಿ ಮಾಡುವುದನ್ನು ಸರ್ಕಾರದವರೇ ಮಾಡುವುದು. ಆದರೆ ಇವಕ್ಕೆ ಅವರು ಒಪ್ಪಿದ್ದರೂ ನಕಾರದಲ್ಲಿ ಅರ್ಜಿ ಕೊಡದೇ ಹೋದರೆ ಅಂತಹ ಸಂದರ್ಭದಲ್ಲಿ ಸರ್ಕಾರದವರು ಅಂತಹವರನ್ನು ಭರ್ತಿ ಮಾಡುವುದು ಕಷ್ಟ.

ಶ್ರೀ ಡಿ. ಮೂಕಪ್ಪ.—ಸಾಧಾರಣವಾಗಿ ಜನರಲ್ ಸಂಸ್ಥೆಗಳಲ್ಲಿ ಷೆಡ್ಯೂಲ್ ಜಾಂಗದಗಳವರಿಗೆ ಸೇರುವುದಕ್ಕೆ ಅವಕಾಶ ಕೊಡದೇ ಇರುವುದರಿಂದ ಅವರು ಪ್ರತ್ಯೇಕವಾಗಿ ಇನ್ನೂ ಹೆಚ್ಚು ಹೆಚ್ಚಾಗಿ ಇರುವುದಕ್ಕೆ ಕೆಲವು ಪ್ರತ್ಯೇಕ ಸಂಘ ಸಂಸ್ಥೆಗಳನ್ನು ತೆಗೆಯುತ್ತೀರಾ ?

ಶ್ರೀ ಮಾಲ ಮರಿಯಪ್ಪ.—ಪ್ರತ್ಯೇಕವಾಗಿ ಅವರಿಗಾಗಿ ಸುಮಾರು 7 ಸೊಸೈಟಿಗಳನ್ನು ಈಗಾಗಲೇ ತೆಗೆದಿವೆ. ಅವುಗಳ ಪೈಕಿ ಎರಡು ಸೊಸೈಟಿಗಳು ನಾರ್ಮಲ್ಲಾಗಿ ಕೆಲಸ ಮಾಡುತ್ತಿವೆ. ಇನ್ನು 5 ಸೊಸೈಟಿಗಳು ಚೆನ್ನಾಗಿ ಕೆಲಸ ಮಾಡುತ್ತಿಲ್ಲ. ಕಾರಣ ಷೇರ್ ಕ್ಯಾಪಿಟಲ್ ಕಡಿಮೆ. ಆದ್ದರಿಂದ ಷೇರುಗಳು ವಸೂಲು ಆಗುವುದೂ ಕಷ್ಟ.

ಶ್ರೀ ಮುಂಜಪ್ಪ ಉಳ್ಳಾಲ್.—ಮುಮ್ಮತ್ ಸರ್ಕಾರದವರು ಮತ್ತು ಬೇರೆ ಸರ್ಕಾರದವರು ಪ್ರತಿಯೊಂದು ಹಿಂದುಳಿದ ವರ್ಗದವರಿಗೆ ಸಬ್ಸಿಡಿ ಮತ್ತು ಲೋನ್ ಕೊಟ್ಟು ಷೇರು ಹೋಲ್ಡರುಗಳನ್ನು ಭರ್ತಿ ಮಾಡುತ್ತಿದ್ದಾರೆ. ಅಂದ ಮೇಲೆ ಮೈಸೂರು ಸರ್ಕಾರದವರು ಸಹ ಆ ರೀತಿ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಮಾಲ ಮರಿಯಪ್ಪ.—ಆರ್ಟಿಸಾನ್ಸ್ ಆಗಿರತಕ್ಕವರು ನಾಮಿನಲ್ಲಾಗಿ ಷೇರು ಕ್ಯಾಪಿಟಲ್ ಕೊಟ್ಟರೆ ಬಾಕಿದ್ದನ್ನು ಸರ್ಕಾರದವರು ಕೊಡುತ್ತಾರೆ.

ಶ್ರೀ ಎಂ. ಕೆ. ಬೊಮ್ಮೇಗಾಡ.—ಸರ್ಕಾರದವರು ಷೇರು ಹೋಲ್ಡರುಗಳನ್ನು ತಾವು ಎಕ್ಸರೋರ್ ಮಾಡುವುದಕ್ಕಾಗುವುದಿಲ್ಲವೆಂದು ಒಂದು ಪೇಳ ಹೇಳುವ ಸಂದರ್ಭದಲ್ಲಿ ಆ ಸಂಘಗಳಲ್ಲಿ ಷೇರುಗಳನ್ನು ತೆಗೆಯಿಸಿಕೊಳ್ಳುತ್ತೇವೆಂದು ಮುಂದೆ ಬಂದವರಿಗೆ ಅಲ್ಲಿ ನೇರಿಸಿಕೊಳ್ಳುವುದಿಲ್ಲವೆಂದರೆ ಆಗ ಸರ್ಕಾರದವರು ಮಾಡತಕ್ಕ ಕಾರ್ಯವೇನು ?

ಶ್ರೀ ಮಾಲ ಮರಿಯಪ್ಪ.—ಷೆಡ್ಯೂಲ್ಡ್ ಟ್ರೈಬ್ಸ್ ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೇ ನಾದರೂ ಷೇರುಗಳನ್ನು ತೆಗೆದುಕೊಳ್ಳುವ ಬಗ್ಗೆ ರೆಫ್ಯೂಜ್ ಆದ ಇನ್‌ಸ್ಟೆನ್ಸೆಸ್ ಇದ್ದರೆ ಅಂಥಾದ್ದನ್ನು ಸರ್ಕಾರದವರು ವಿಚಾರ ಮಾಡುತ್ತಾರೆ.

CONSTRUCTION OF THE DISTRICT BOARD HIGH SCHOOL BUILDING AT HULIYARDURGA IN KUNIGAL TALUK

* *Q.*—156 Sri N. Huchmasthy Gowda (Chandrasekharapura).—Will the Government be pleased to state;—

(*a*) the date of the laying of the foundation for the District Board High School Building at Huliyardurga in Kunigal Taluk;

(*b*) whether the site was selected after a spot inspection by the Deputy Commissioner, the Special Officers, District Board, the District Health Officers, and the Executive;

(*c*) whether the spot has been inspected by Sri H. M. Channabasappa, Minister for Public Works Department;

(*d*) the reasons for not constructing the building so far ?

A.—Sri H. K. VEERANNA GOWDH (Minister for Public Works and Electricity)—

(a) 25th October 1956

(*b*) Yes; on 20th January 1961 by the Deputy Commissioner, the District Health Officer and the Assistant Engineer, Kunigal.

(*c*) No.

(*d*) For want of a suitable site in the past.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಆಸ್ಪತ್ರಿಗಾರ ಶಿಲೆಯನ್ನು ಹಾಕುವುದಕ್ಕೆ ಮುಂಚಿತವಾಗಿ ಹೆಲ್ತ್ ಆಫೀಸರ್ ಮತ್ತು ಅಸಿಸ್ಟೆಂಟ್ ಇಂಜಿನಿಯರ್ ಸ್ಥಳವನ್ನು ಆಜಮಾಯಿಷಿ ಮಾಡಿದ್ದರೇ ?

† ಶ್ರೀ ಎಚ್. ಕೆ. ವೀರಣ್ಣಗೌಡ.—ಅದು ಸ್ವಲ್ಪ ಸಂದೇಹಾಸ್ಪದ ವಿಚಾರವಾಗಿದೆ. ನಾನು ಸುಮ್ಮನೆ ಈ ಪ್ರಶ್ನೆಗೆ ಒಂದು ಉತ್ತರ ಹೇಳಿಬಿಡೋಣವೆಂದು ಹೇಳುವುದಕ್ಕಾಗುವುದಿಲ್ಲ. ಇದು ಒಂದು ಕಥೆಯಾಗಿದೆ. ಸ್ಥಳವನ್ನೇನೋ ಮುಂಚೆಯೇ ನೋಡಿದ್ದರು. ನೋಡಿದ್ದಾದ ಮೇಲೆ ಎರಡು ಗುಂಪುಗಳಾದವು. ಆದರೆ ಆಸ್ಪತ್ರಿಗಾರ ಶಿಲೆಯನ್ನು ಹಾಕಿದಾಗ ಆವರಲ್ಲಿ ಯಾರೂ ಇರಲ್ಲಿಲ್ಲ. ಬಂದಿದ್ದವರು ಮಾತ್ರ ಎಲ್ಲವನ್ನು ನೋಡಿಕೊಂಡು ಹೋದರು ಎಂದು ನಾನು ಹೇಳಬೇಕಾಗಿದೆ. ಅದೇ ಇದರ ಪರಿಸ್ಥಿತಿ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಇತ್ತೀಚೆಗೆ ರೋಗೋಪಯೋಗಿ ಇರಾಖೆಯ ಮಂತ್ರಿಗಳು ಈ ಸ್ಥಳವನ್ನು ಆಜಮಾಯಿಷಿ ಮಾಡಿದ್ದಾರೆಯೇ ?

ಶ್ರೀ ಎಚ್ ಕೆ. ವೀರಣ್ಣಗೌಡ.—ಇತ್ತೀಚೆಗೆ ನಾನು ಬಂದ ಮೇಲೆ ನೋಡಿದ್ದೆನೆ.

ಶ್ರೀ ಎಚ್. ಹುಚ್ಚಮಾಸ್ತಿ ಗೌಡ.—ಈಗಾಗಲೇ ಆ ಬಗ್ಗೆ ತೀರ್ಮಾನ ಕ್ಕೆಗೊಳ್ಳರಾಗಿದೆಯೇ?

ಶ್ರೀ ಹೆಚ್. ಕೆ. ವೀರಣ್ಣಗೌಡ.—ತೀರ್ಮಾನಮಾಡಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ಕಟ್ಟಡದ ಕೆಲಸವನ್ನು ಕೂಡಲೇ ತೆಗೆದುಕೊಳ್ಳುವುದಕ್ಕೆ ಹುಕುಂ ಮಾಡಿದ್ದೀರಾ?

ಶ್ರೀ ಹೆಚ್. ಕೆ. ವೀರಣ್ಣಗೌಡ.—ಹುಕುಂ ಮಾಡಿದೆ. ಯಾವುದೋ ಒಂದು ಧರ್ಮದ ಫಂಡು ನುಮಾರು 20 ಸಾವಿರ ರೂಪಾಯಿಗಳ ಆ ಹೈಸ್ಕೂಲಿನ ಅಥಾರಿಟೀಸ್ ಅವರ ಹತ್ತಿರ ಇದೆಯಂತೆ ಅದನ್ನೂ ಸಹ ಈ ಬಾಬಿಗೆ ಕೊಟ್ಟಿದ್ದಾರೆ. ಬಾಕಿದ್ದನ್ನು ಸರ್ಕಾರದವರು ಕೊಡುತ್ತಾರೆ. ಅಂದಮೇಲೆ ಹಣದ ಅಭಾವವಿಲ್ಲ ಅದ್ದರಿಂದ ಕೆಲಸವನ್ನು ಕೂಡಲೆ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ತಾವು ಅಪ್ಪಣೆ ಕೊಡಿಸಿದ್ದೀರಿ. ಈ ಕೆಲಸ ಇಷ್ಟು ತಡವಾಗುವುದಕ್ಕೆ ಕಾರಣವೇನು ?

ಶ್ರೀ ಹೆಚ್. ಕೆ. ವೀರಣ್ಣಗೌಡ.—ತಕರಾರು ಇದ್ದುದೇ ಕಾರಣ. ಈ ಸೈಟು ಬೇಕು, ಆ ಸೈಟು ಬೇಕೆಂದು ಈ ತಾಲ್ಲೂಕಿನ ಜನರಲ್ಲೇ ಎರಡು ಭಾಗಗಳಾಗಿವೆ. ಒಬ್ಬರು ನಮ್ಮ ಭಾಗಕ್ಕೆ ಹತ್ತಿರ ಇರಬೇಕೆಂದು, ಇನ್ನೊಬ್ಬರು ನಮ್ಮ ಭಾಗಕ್ಕೆ ಹತ್ತಿರವಿರಬೇಕೆಂದು ಕಾದಾಡುತ್ತಿದ್ದರು. ಆದಕೊಸ್ಕರ ಇಬ್ಬರಿಗೂ ಮಧ್ಯೆ ಇರುವಹಾಗೆ ಮಾಡಬೇಕೆಂದು ನೋಡಿದ್ದಾಗ ಸರಿಹೋಗಲಿಲ್ಲ ಆದ್ದರಿಂದ ನಾನು ಒಂದ ಮೇಲೆ ಡೆಪ್ಯೂಟಿ ಕಮೀಷನರಿಗೆ ಎಗ್ಸಿಕ್ಯೂಟಿವ್ ಇಂಜಿನಿಯರ್ ನಾನು ಎಲ್ಲರೂ ಸೇರಿ ಜಾತ್ರೆಗೆ ಈಗ ಒಂದು ತೀರ್ಮಾನ ಮಾಡಿ ಎಂದು ಕಳುಹಿಸಿದ್ದೇವೆ. ಮುಚ್ಚಳಿಕೆ ಸಹ ತೆಗೆದುಕೊಳ್ಳಿ ಎಂದೂ ಸಹ ನಾನು ಹೇಳಿದೆ ಈಗ ಒಂದು ಕಡೆಯವರು ಆ ರೀತಿ ಕೊಟ್ಟಿದ್ದಾರೆ, ಇನ್ನೊಂದು ಕಡೆಯವರು ತಕರಾರು ಮಾಡಿದ್ದಾರೆ. ಡೆಪ್ಯೂಟಿ ಕಮಿಷನರ ತೀರ್ಮಾನು ಸಹ

(ಶ್ರೀ ಎಚ್. ಕೆ. ವೀರಣ್ಣಗೌಡ)

ಈಚೆಗೆ ಬಂತು. ಮತ್ತೆ ನಾನೇ ಹೋಗಿ ನೋಡಿ ಎರಡು ಭಾಗಗಳಿಗೂ ತೀರ ಮಧ್ಯದಲ್ಲಿ ನುಮಾರು ಸ್ವಲ್ಪ ವ್ಯತ್ಯಾಸದಲ್ಲಿ ಈ ಜಾಗವನ್ನು ಸೆಲೆಕ್ಟ್ ಮಾಡಿ ಕೊಡಬೇಕೆಂದು ತೀರ್ಮಾನ ಮಾಡಲಾಗಿದೆ.

SHORT NOTICE QUESTIONS AND ANSWERS

POLICE FIRING IN BOMMANAHALLI VILLAGE, BELLARY DISTTRIC.

Q.—61. Sri C. J. MUCKANNAPPA (Gubbi).—

Will the Government be pleased to state :—

(*a*) what was the immediate cause for the Police to open fire in Bommanahalli Village, Bellary District, about 4 days back ;

(*b*) who was the officer present at the time of opening the fire ;

(*c*) the number of casualties due to this firing ?

A.—Sri B. D. JATTI (Chief Minister) [on behalf of Sri H. M. CHANNABASAPPA (Minister for Home)]—

(*a*) During a prohibition drive by the Police on 8th November 1961 in Bommanahalli, a crowd of about 100 persons attached the Police party with deadly weapons. They poured Kerosene oil over the Sub-Inspector and a Police Constable and wanted to set fire to them A mild lathi charge by the Police proved ineffective. Finding the situation going out of control and their lives in danger, the Police party had to open fire on the mob purely in self defence.

(*b*) The Sub-Inspector of Moka Police Station, Ballary Taluk.

(*c*) One person was killed and two persons were injured.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನೂರು ಜನ ಮೇಲೆ ಬಿದ್ದುದರಿಂದ ಹೆದರಿ ಪ್ರಾಣ ಉಳಿಸಿಕೊಳ್ಳಲು ಇಷ್ಟೆಲ್ಲ ಮಾಡಿದರು ಎಂದು ಹೇಳಿದ್ದಿರಿ. ಎಷ್ಟು ಜನ ಕಾನ್ಸ್‌ಟೇಬಲ್‌ಗಳು, ದಫೇದಾರರು ಸಬ್ ಇನ್ಸ್‌ಪೆಕ್ಟರು ಹೋಗಿದ್ದರು ?

† Sri B. D. JATTI (Chief Minister).— Sir, the police party caught hold of the culprits and also the implements and at that time a crowd of hundred people gathered and attacked the police party with lathies and stones.

Sri C. J. MUCKANNAPPA.— My question is, whether any more Constables, Head Constables and Sub-Inspector had gone with the Police Constable ?

Sri B. D. JATTI.—One Sub-Inspector and one Head Constable and four Police Constables had gone.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬೊಮ್ಮನಹಳ್ಳಿಗೆ ಹೊಹಿ ರ್ಪ್ ರೈಡ್‌ಗಾಗಿ ಹೋಗುವುದಕ್ಕೆ ಏನಾದರೂ previous arrangement ಮಾಡಿದ್ದೊ ? Illicit distillation ನಡೆಯುವುದನ್ನು raid ಮಾಡಬೇಕೆಂದು ಸಮಾರೋಚನೆ ನಡೆದಿತ್ತೊ ?